ಬಸ್ಸಿನಿಂದಿಳಿದು ಎರಡು ಮೈಲು ನಡೆದು, ಮನೆಯ ಸುತ್ತಾ ಸುತ್ತುವರಿದ ತೋಟ ಬಳಿಸಿ, ಕೆರೆಯ ಪಕ್ಕದ ಇಳಿಜಾರಿನಲ್ಲಿ ಇಳಿದರೆ ಅಂಗಳದ ಅಡಿಕೆ ಚಪ್ಪರ ಮೊದಲು ಎದುರಾಗುತ್ತಿತ್ತು. ಅಂಗಳದ ಮತ್ತೊಂದು ಬದಿಯಲ್ಲಿರುವ ಬಾವಿಕಟ್ಟೆ. ಅದಕ್ಕೆ ತಾಗಿಯೇ ಇದ್ದ ದೊಡ್ಡ ರಂಜೆಯ ಮರ. ಮನೆ ಸಮೀಪಿಸುತ್ತಿದ್ದಂತೇ ಅನತಿ ದೂರಕ್ಕೂ ಪಸರಿಸುತ್ತಾ ಮೂಗಿಗೆ ಅಡರುವ ಅದರ ಮಂದ ಸುಗಂಧ. ಅಮ್ಮ ರಂಜೆ ಹೂ ಹೆಕ್ಕುತ್ತಾ ಹೂವಿನ ಸುವಾಸನೆ ಆಘ್ರಾಣಿಸುತ್ತಾ ಮೆಲ್ಲನಡಿಯಿಡುತ್ತಿದ್ದರೆ, ಅವನೂ ಒಂದೊಂದೇ ಹೂ ಆರಿಸುತ್ತಾ ಚಡ್ಡಿ ಜೇಬಿನೊಳಗೆ ತುಂಬಿಕೊಳ್ಳುತ್ತಿದ್ದ. ಹಾಗೆ ತುಂಬಿಕೊಂಡದ್ದನ್ನು ಮನೆಗೆ ಬಂದು ಒಣಗಿಸಿ ಪುಸ್ತಕದ ನಡುವೆ ಇಟ್ಟುಕೊಂಡು ಆಗಾಗ ಪುಸ್ತಕವನ್ನು ಮೂಗಿನ ಹತ್ತಿರ ಹಿಡಿದು ಅದರ ಪರಿಮಳ ಹೀರುತ್ತಾ ಮೈ ಮರೆಯುತ್ತಿದ್ದ. ಆ ಸುವಾಸನೆ ಗತದ ಯಾವುದೊ ನೆನಪನ್ನು ಆಪ್ತಗೊಳಿಸುತ್ತಾ ಮುದಗೊಳಿಸುತ್ತಿತ್ತೆಂದು ಅವನ ಊಹೆ. ಹಾಗೆ ತನ್ನನ್ನು ಬೆಚ್ಚಗಾಗಿಸುತ್ತಿದ್ದದ್ದು ಯಾವುದರ ನೆನಪೆಂದು ಮಾತ್ರ ಎಂದೂ ಸ್ಪಷ್ಟವಾಗಿರಲಿಲ್ಲ.

ಚಪ್ಪರದ ಒಂದು ಬಗಲಲ್ಲಿ ಫಳಫಳ ಹೊಳೆಯುತ್ತಾ ನಿಂತಿರುತ್ತಿದ್ದ ಕಪ್ಪು ಅಂಬಾಸಿಡರ್ ಕಾರು ಮಾತ್ರ ವಿಚಿತ್ರ ತಳಮಳವನ್ನು ಹುಟ್ಟಿಸುತ್ತಿತ್ತು. ತಣ್ಣಗೆ ಕೊರೆಯುವ ಅಂಗಳ ಹಾದು ಒಳಗಡಿಯಿಟ್ಟರೆ ತರಹೇವಾರಿ ಹೂವಿನಿಂದ ಕಂಗೊಳಿಸುವ ತೋಟ, ಬದಿಯಲ್ಲೊಂದು ನಾಯಿಗೂಡು, ಬಾಲ ಅಲ್ಲಾಡಿಸುತ್ತಾ ಮೈ ಮೇಲೆರಗಿ ಬರುವ ಆಲ್ಸೇಷಿಯನ್ ನಾಯಿ, ಅವನು ಮತ್ತಷ್ಟು ಅಮ್ಮನ ಸೆರಗಿಗೆ ಅಂಟಿಕೊಂಡು ಒಂದು ನಮೂನಿ ಹಿಂಜರಿಕೆಯಿಂದಲೇ ಮನೆಯೊಳಗೆ ಪ್ರವೇಶಿಸುತ್ತಿದ್ದ. ವೈದಿಕ ಮುಗಿದು ಊಟಕ್ಕೆ ಹಾಕುವುದನ್ನೇ ಸೆರಗಿನಡಿ ಮುಖ ಹುದುಗಿಸಿ ತಳಮಳದಿಂದಲೇ ಕಾಯುತ್ತಾ ನಡುಮನೆ ಮೂಲೆಯಲ್ಲಿ ಚೂಪಾಗಿ ಕೂತಿರುತ್ತಿದ್ದದುಂಟು.

'ಯೆಂತಕಾ ಮಾಣಿ, ಮುಸುಂಡಿ ತರ ಇರೋದು? ಇಶ್ಶೀ, ಅಮ್ಮನ್ ಸೆರ್ಗು ಬಿಡು!' ದೊಡ್ಡಮ್ಮನ ಮಾತು. 'ಅಲ್ಲಾ ಮರಾಯ್ತಿ, ಮಗ ಹಿಂಗೆ ಬೆಳೆದ್ರೆ ಮುಂದೆಂತದೇ ನಿನ್ ಗತಿ?...' ದೊಡ್ಡಮ್ಮನದು ಕಳಕಳಿಯ ಮಾತೋ, ವ್ಯಂಗ್ಯದ್ದೋ ಯಾರಿಗೆ ಗೊತ್ತು? ಅಮ್ಮನೂ ಸೀರೆಯನ್ನು ಕುತ್ತಿಗೆ ಸುತ್ತಾ ಬಿಗಿಯಾಗಿ ಎಳೆದುಕೊಳ್ಳುತ್ತಾ ಮೂಲೆಯಲ್ಲಿ ಮುದುಡಿ ಕುಳಿತವಳು ಊಟವಾಗುತ್ತಿದ್ದಂತೇ ಎದ್ದು ಬರುತ್ತಿದ್ದಳು. ಅವಳಿಗೂ ತನ್ನಂತಹದ್ದೇ ಎಂತದೋ ಚಡಪಡಿಕೆ ಇದ್ದಿರಬೇಕೆಂದು ಶ್ರೀಪಾದ ಈಗ ಅವನ್ನೆಲ್ಲಾ ಅರ್ಥೈಯಿಸಿಕೊಳ್ಳಬಲ್ಲ.

'ಪದ್ಮಕ್ಕಯ್ಯ ಜೀವಂತಿದ್ರೂ ಒಂದೇ, ಇಲ್ಲದಿದ್ರೂ ಒಂದೇ. ತಲಿ ಒಂಚೂರ್ ಸಮಾ ಇದ್ದಾಗ್ಲಾದ್ರೂ ಹ್ವಾಗಿ ಕೇಳಿದ್ರಾಗ್ತಿತ್ತು. ಈಗಂತೂ ಪೂರಾ ಹನ್ನೆರಡಾಣೆಯಾಗಿದ್ದಂತಲಾ ಮಾರಾಯ! ಯೆಂತಾ ಪ್ರಯೋಜ್ನಿಲ್ಲಾಂತ್ರಪ್ಪಾ. ಯೆಲ್ಲಾ ಮಲ್ಗಿದ್ದಲ್ಲೇ ಅಂತೇ! ಅವ್ರಾಗಿದ್ದಕ್ಕಾಯ್ತು ಅಂತೀನಿ. ಮನೀ ತುಂಬಾ ಆಳು ಕಾಳಂತಾ ಹೆಂಗೋ ಸಂಭಾಳಿಸ್ತ್ರು. ನಂಕೈಲಿ ಆಗ್ತಿತ್ತಾ ಹೇಳು!'

ಈಗೊಂದೆರಡು ವರುಷಗಳ ಹಿಂದೆ ವೈದೇಹಿಯನ್ನು ನೋಡಲಿಕ್ಕೆ ಊರಿಗೆ ಬಂದಾಗ ಇದೇ ಅಮ್ಮ ಹೇಳಿದ ಮಾತು. ಈಗ ದೊಡ್ಡಮ್ಮ ಸತ್ತೂ ವರುಷಗಳೇ ಕಳೆದಿವೆ. ತೊಂಬತ್ತಾರರ ತುಂಬು ಜೀವನ ನಡೆಸಿ ಹೋದ ವರುಷ ದೊಡ್ಡಪ್ಪಯ್ಯನೂ ಜಗದ ವ್ಯಾಪಾರ ಮುಗಿಸಿ ಆಗಿದೆ. ಅಮ್ಮನಿಗೆ ಏನಿಲ್ಲವೆಂದರೂ ಎಪ್ಪತ್ತೈದಾಗಿದೆ.

ಹೇಗೋ ಎಂತೋ ಜೀವನ ಸಾಗಿ ಇಲ್ಲಿವರೆಗೂ ಬಂದು ನಿಂತಾಗಿದೆ. ಯಾರ ಮುಂದೂ ಕೈ ಒಡ್ಡದೇ ವೈದೇಹಿ, ಅವನು ಬಿ.ಕಾಂ. ಮಾಡಿ, ಎಂ.ಕಾಂ. ಮುಗಿಸಿ ಒಂದು ಖಾಸಗಿ ಕಾಲೇಜಿನಲ್ಲಿ ಲೆಕ್ಚರರಾಗಿ ದುಡಿಯುವವರೆಗೂ ಟೊಂಕ ಕಟ್ಟಿ ನಿಂತು ಛಲದಿಂದಲೇ ಅವನನ್ನು ಬೆಳೆಸಿದ್ದರ ಬಗ್ಗೆ ಶ್ರೀಪಾದನಿಗೆ ಹೆಮ್ಮೆಯಿದೆ. ಸುಮತಿಯನ್ನು ಪ್ರೀತಿಸಿ ಮದುವೆಯಾದಾಗಲೂ ಅಷ್ಟೇನೂ ಒಪ್ಪಿಗೆಯಿಲ್ಲದಿದ್ದರೂ ಸಮ್ಮತಿಸಿದ್ದನ್ನು ಅವನೆಂದೂ ಮರೆತವನಲ್ಲ. ಚೈತ್ರಾ ಹುಟ್ಟಿದಾಗ ಕೂಡಾ ಅತ್ಯಂತ ಉತ್ಸಾಹದಿಂದಲೇ